

ಹೊಸ
ನಾಯಕ
ಹೊಸ
ಭರವಸೆ

ಜನಸೇವೆಯಿಂದ ಜನನಾಯಕತ್ವದತ್ತ

ನಾಗರಬಾವಿ ವಾರ್ಡಿಗಾಗಿ

ವೀರಯ್ಯ ಹಿರೇಮಠ

ನಾಗರಬಾವಿ ವಾರ್ಡಿನ ಮಾನ್ಯ ತಂದೆ-ತಾಯಂದಿರು, ಹಿರಿಯರು, ಸಹೋದರ-ಸಹೋದರಿಯರು, ಸ್ನೇಹಿತರು ಹಾಗೂ ಗೌರವಾನ್ವಿತ ನಾಗರಿಕ ಬಂಧುಗಳಿಗೆ ವೀರಯ್ಯ ಹಿರೇಮಠ ಅವರ ವಂದನೆಗಳು.

ನಾನು ಮುಂಬರುವ ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ಜಬಿಎ) ಚುನಾವಣೆಯಲ್ಲಿ ನಾಗರಬಾವಿ ವಾರ್ಡಿನ ತಮ್ಮ ಸೇವೆಗೆ ಆಕಾಂಕ್ಷಿಯಾಗಿದ್ದೇನೆ. ದಯವಿಟ್ಟು ನನ್ನನ್ನು ತಮ್ಮ ಕುಟುಂಬದ ಸದಸ್ಯನಂತೆ ಪರಿಗಣಿಸಿ, ಜನಸೇವೆಗೆ ಅವಕಾಶ ನೀಡುವಂತೆ ಗೌರವಪೂರ್ವಕವಾಗಿ ಮನವಿ ಮಾಡುತ್ತೇನೆ.

ಸಮಾಜಸೇವೆಯನ್ನು ನನ್ನ ಧ್ಯೇಯವಾಗಿಸಿಕೊಂಡು, ಹಲವು ವರ್ಷಗಳಿಂದ ಯಾವುದೇ ಅಧಿಕಾರವಿಲ್ಲದೇ ಸಾರ್ವಜನಿಕ ಸಮಸ್ಯೆಗಳ ಪರಿಹಾರ, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಸಮಾಜದ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದೇನೆ.

ಇಲ್ಲಿಯವರೆಗೆ ನಾನು ಮಾಡಿದ ಸಮಾಜಮುಖ ಕಾರ್ಯಗಳು ಹಾಗೂ ಮುಂದಿನ ದಿನಗಳಲ್ಲಿ ನಾಗರಬಾವಿ ವಾರ್ಡಿನ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ನಾಗರಬಾವಿ ವಾರ್ಡನ್ನು ಸ್ವಚ್ಛ, ಸುರಕ್ಷಿತ, ಅಭಿವೃದ್ಧಿ ಹೊಂದಿದ ಆದರ್ಶ ವಾರ್ಡನ್ನಾಗಿ ರೂಪಿಸುವುದು ನನ್ನ ಸಂಕಲ್ಪ. ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡಿ, ಪಾರದರ್ಶಕ, ಪ್ರಾಮಾಣಿಕ ಮತ್ತು ಜವಾಬ್ದಾರಿಯುತ ಸೇವೆ ಸಲ್ಲಿಸಲು ನಾನು ಬದ್ಧನಾಗಿದ್ದೇನೆ.

ತಮ್ಮ ಆಶೀರ್ವಾದ, ಮಾರ್ಗದರ್ಶನ ಮತ್ತು ಸಹಕಾರವೇ ನನ್ನ ಶಕ್ತಿ. ನಾಗರಬಾವಿ ವಾರ್ಡಿನ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕಾಗಿ ಪೂರ್ಣ ಸಮರ್ಪಣೆಯಿಂದ ಸೇವೆ ಸಲ್ಲಿಸುವುದಾಗಿ ಪ್ರಾಮಾಣಿಕವಾಗಿ ಭರವಸೆ ನೀಡುತ್ತೇನೆ.

ವೀರಯ್ಯ ಹಿರೇಮಠ ಅವರ ಕಿರು ಪರಿಚಯ

ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಸಮಾಜದ ನೋವು-ನಲಿವುಗಳನ್ನು ಸಮೀಪದಿಂದ ಕಂಡು ಬೆಳೆದವನು ನಾನು. ಅಧಿಕಾರವಿಲ್ಲದೇನೇ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿದ್ದೇನೆ. ಸಮಾಜದ ಅಭಿವೃದ್ಧಿಗಾಗಿ ವೈಯಕ್ತಿಕ ಸುಖ-ಸೌಕರ್ಯಗಳನ್ನು ಪಕ್ಕಕ್ಕಿಟ್ಟು, ಇಂದಿಗೂ ಸರಳ ಜೀವನ ನಡೆಸುತ್ತಿದ್ದೇನೆ.

ಇದುವರೆಗೆ ಮಾಡಿದ ಪ್ರಮುಖ ಸಮಾಜಮುಖಿ, ಮಾನವೀಯ ಮತ್ತು ಅಭಿವೃದ್ಧಿ ಕಾರ್ಯಗಳು

ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

- ಸಮಾಜದ ಆರೋಗ್ಯದ ಮಹತ್ವವನ್ನು ಮನಗಂಡು, ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.
- 700ಕ್ಕೂ ಹೆಚ್ಚು ಜನರಿಗೆ ಉಚಿತ ಕಣ್ಣಿನ ತಪಾಸಣೆ ನಡೆಸಿ, ಅಗತ್ಯವಿದ್ದವರಿಗೆ ಕನ್ನಡಕಗಳನ್ನು ವಿತರಿಸಲಾಗಿದೆ ಹಾಗೂ 90 ಜನರಿಗೆ ಯಶಸ್ವಿಯಾಗಿ ಕ್ಯಾಟರಾಕ್ಟ್ (ಕಣ್ಣಿನ ಪೊರೆ) ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ.
- 300 ಜನರಿಗೆ ಉಚಿತ ದಂತ (ಹಲ್ಲು) ತಪಾಸಣೆ ಮತ್ತು ಚಿಕಿತ್ಸೆ ಶಿಬಿರಗಳನ್ನು ನಡೆಸಲಾಗಿದೆ.
- 200 ಜನರಿಗೆ ಕಿವಿ–ಮೂಗು–ಗಂಟಲು (ENT) ತಪಾಸಣೆ ಮತ್ತು ಅಗತ್ಯವಿದ್ದವರಿಗೆ ಶಸ್ತ್ರಚಿಕಿತ್ಸೆ ವ್ಯವಸ್ಥೆ ಮಾಡಲಾಗಿದೆ.
- ಕ್ಯಾನ್ಸರ್ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಗಳನ್ನು ಆಯೋಜಿಸಿ, ಆರಂಭಿಕ ಹಂತದಲ್ಲೇ ರೋಗ ಪತ್ತೆ ಹಾಗೂ ಚಿಕಿತ್ಸೆಗೆ ಸಹಾಯ ಮಾಡಲಾಗಿದೆ.
- ಕ್ಯಾನ್ಸರ್, ಕ್ಷಯರೋಗ ಮತ್ತು HIV/AIDS ಪೀಡಿತರಿಗೆ ಆಹಾರ, ಔಷಧಿ, ಚಿಕಿತ್ಸೆ ವೆಚ್ಚ ಹಾಗೂ ಅಗತ್ಯವಿದ್ದಾಗ ಅಂತ್ಯಸಂಸ್ಕಾರಕ್ಕೆ ಸಹಾಯ ಒದಗಿಸಲಾಗಿದೆ.
- ಮಾನವ ಸೇವೆಯ ಮಹತ್ವವನ್ನು ಅರಿತು, ನಿರಂತರವಾಗಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
- ನಾಯಂಡಹಳ್ಳಿಯಲ್ಲಿ ನಿರ್ಮಾಣಗೊಂಡ ಬಹುಕೋಟಿ ಆಸ್ಪತ್ರೆಯಲ್ಲಿ ಸಿಬ್ಬಂದಿ ನೇಮಕ ಮತ್ತು ಸೇವೆ ಆರಂಭವಾಗುವಂತೆ ಶಾಸಕರು, ಆರೋಗ್ಯ ಸಚಿವರು ಮತ್ತು ಉಪಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.







ಜನಹಿತ ಕಾರ್ಯಗಳು ಮತ್ತು ಸಾಧನೆಗಳು

- 6,375 ಸಾರ್ವಜನಿಕರ ಸಹಿಗಳನ್ನು ಸಂಗ್ರಹಿಸಿ 16 ಜನವರಿ 2023ರಂದು ಭಾರತೀಯ ರೈಲ್ವೆಗೆ ಅಧಿಕೃತ ಮನವಿ ಸಲ್ಲಿಸಲಾಯಿತು. ಇದರ ಪರಿಣಾಮವಾಗಿ June 2023 ರಿಂದ ನಾಯಂಡಹಳ್ಳಿ ರೈಲು ನಿಲ್ದಾಣದಲ್ಲಿ ಎರಡು ಹೆಚ್ಚುವರಿ ರೈಲುಗಳ ನಿಲುಗಡೆಗೆ ಅನುಮೋದನೆ ದೊರೆತು ಜಾರಿಗೊಂಡಿತು.
- ರೈಲ್ವೆ ಇಲಾಖೆಯೊಂದಿಗೆ ನಡೆಸಿದ ನಿರಂತರ ಪ್ರಯತ್ನ ಮತ್ತು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಖಾತೆಯ ಗೌರವಾನ್ವಿತ ಸಚಿವರಾದ ಶ್ರೀ ವಿ. ಸೋಮಣ್ಣ ಅವರೊಂದಿಗೆ ಕೈಗೊಂಡ ಸಂಯುಕ್ತ ಪ್ರಯತ್ನಗಳ ಫಲವಾಗಿ, 17 ಫೆಬ್ರವರಿ 2026ರಿಂದ ಚಾಮುಂಡಿ ಎಕ್ಸ್‌ಪ್ರೆಸ್, ಬಸವ ಎಕ್ಸ್‌ಪ್ರೆಸ್, ತೂತುಕುಡಿ ಎಕ್ಸ್‌ಪ್ರೆಸ್ ಹಾಗೂ ಗೋಲ್ ಗುಂಬಜ್ ಎಕ್ಸ್‌ಪ್ರೆಸ್ ಸೇರಿದಂತೆ ನಾಲ್ಕು ಹೆಚ್ಚುವರಿ ರೈಲುಗಳ ನಿಲುಗಡೆ ಆರಂಭಗೊಂಡಿದೆ. ಇದರಿಂದ ಪ್ರಯಾಣಿಕರ ಸಂಚಾರ ಸೌಲಭ್ಯ ಮತ್ತು ಸಂಪರ್ಕ ವ್ಯವಸ್ಥೆ ಗಮನಾರ್ಹವಾಗಿ ಸುಧಾರಿಸಿದೆ.






ಸಮಾಜ ಕಲ್ಯಾಣ ಮತ್ತು ಮಾನವೀಯ ಸೇವೆಗಳು

- ಕೊರೋನಾ ಲಾಕ್‌ಡೌನ್ ಸಮಯದಲ್ಲಿ, ನಿರಂತರ 45 ದಿನಗಳ ಕಾಲ ಪ್ರತಿದಿನ ಮಧ್ಯಾಹ್ನ 1,000 ಜನರಿಗೆ ಹಾಗೂ ರಾತ್ರಿ 1,000 ಜನರಿಗೆ ಉಚಿತ ಊಟದ ವ್ಯವಸ್ಥೆಯನ್ನು ಯಶಸ್ವಿಯಾಗಿ ಮಾಡಲಾಗಿದ್ದು, ಒಟ್ಟು 90,000ಕ್ಕೂ ಹೆಚ್ಚು ಆಹಾರ ಪ್ಯಾಕೆಟ್‌ಗಳನ್ನು ವಿತರಿಸಲಾಗಿದೆ.
- "ಇದರ ಜೊತೆಗೆ, ಕೋವಿಡ್–19 ಮಹಾಮಾರಿ ಸಮಯದಲ್ಲಿ ಸಂಕಷ್ಟದಲ್ಲಿದ್ದ ಸಮುದಾಯದೊಂದಿಗೆ ನಿಂತು, ಅಗತ್ಯವಿದ್ದ ಕುಟುಂಬಗಳಿಗೆ 10 ಕ್ವಿಂಟಲ್ ಅಗತ್ಯ ಆಹಾರ ಸಾಮಗ್ರಿಗಳನ್ನು ವಿತರಿಸುವ ಮೂಲಕ ಜನಸೇವೆಯಲ್ಲಿ ತೊಡಗುವ ಅವಕಾಶ ನನಗೆ ದೊರಕಿತು."
- ಪ್ರತಿವರ್ಷ ಚಳಿಗಾಲದಲ್ಲಿ ನಿರ್ಗತಿಕರು, ರಸ್ತೆಬದಿ, ರೈಲು ನಿಲ್ದಾಣಗಳು ಮತ್ತು ಪಾಳುಬಿದ್ದ ಕಟ್ಟಡಗಳಲ್ಲಿ ವಾಸಿಸುವ ಸುಮಾರು 500 ಜನರಿಗೆ ಕಂಬಳಿ / ರಗ್ಗುಗಳನ್ನು ವಿತರಿಸಲಾಗುತ್ತಿದೆ.
- ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಸರ್ಕಾರಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಗೆ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಹಕಾರದಿಂದ ₹1,00,000 ಹಣ ಸಂಗ್ರಹಿಸಿ ಯಶಸ್ವಿ ಚಿಕಿತ್ಸೆ ಒದಗಿಸಲಾಗಿದೆ.
- ಹಾವು ಕಡಿತದಿಂದ ಮೃತಪಟ್ಟ ವ್ಯಕ್ತಿಯ ಪತ್ನಿಗೆ ಅಂದಿನ BBMP (ಈಗಿನ GBA) ಮೂಲಕ ₹5 ಲಕ್ಷ ಪರಿಹಾರ ಕೊಡಿಸಲಾಯಿತು.
- 2008ರಲ್ಲಿ ಆನೇಕಲ್ ತಾಲೂಕಿನ ಚಂದಾಪುರದಲ್ಲಿ ಕಳ್ಳಬಟ್ಟಿ ಸೇವನೆಯಿಂದ ಮೃತಪಟ್ಟ ದಂಪತಿಯ 5 ಜನ ಹೆಣ್ಣು ಮಕ್ಕಳಿಗೆ ₹1,00,000 ಪರಿಹಾರವನ್ನು ಮಕ್ಕಳ ಹೆಸರಿನಲ್ಲಿ ಠೇವಣಿ ಮಾಡಿಸಲಾಗಿದೆ.
- ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ತಮ್ಮ ಹಕ್ಕುಗಳನ್ನು ಕೇಳಿದ್ದಕ್ಕಾಗಿ ಅನ್ಯಾಯವಾಗಿ ಕೆಲಸದಿಂದ ತೆಗೆದು ಹಾಕಿದ್ದ 25ಕ್ಕೂ ಹೆಚ್ಚು ಸಪಾಯಿ ಕರ್ಮಚಾರಿಗಳನ್ನು ಮರು ಸೇರಿಸಲು, ರಾಷ್ಟ್ರೀಯ ಸಪಾಯಿ ಕರ್ಮಚಾರಿ ಆಯೋಗ ಮತ್ತು ಕಾರ್ಮಿಕ ಇಲಾಖೆ ನಿರ್ದೇಶನದಂತೆ, ಪೂರ್ತಿ ಸಂಬಳ ಹಾಗೂ ಅವರಿಗೆ ಸಲ್ಲುವ ಎಲ್ಲಾ ಹಕ್ಕುಗಳನ್ನು ಕೊಡಿಸುವಲ್ಲಿ ಯಶಸ್ವಿ.
- ರಸ್ತೆಬದಿ ಕಂಡುಬಂದ ಅನಾಥ ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನು ಪೊಲೀಸ್ ಇಲಾಖೆಯ ಸಹಕಾರದಿಂದ ಅನಾಥಾಶ್ರಮಗಳಿಗೆ ಸೇರಿಸಿ ಪುನರ್ವಸತಿ ಮಾಡಲಾಗಿದೆ.
- "ನನ್ನ ಪ್ರದೇಶದಲ್ಲಿ ಅಗ್ನಿ ಅವಘಡ ಸಂಭವಿಸಿದಾಗ, ನಾನು ಸ್ವತಃ ಗಮನಿಸಿದರೂ ಅಥವಾ ಯಾರಾದರೂ ಮಾಹಿತಿ ನೀಡಿದರೂ, ತಕ್ಷಣವೇ ಪೊಲೀಸ್ ಮತ್ತು ಕರ್ನಾಟಕ ಸರ್ಕಾರದ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಸಹಾಯದಿಂದ ಅದನ್ನು ನಿಯಂತ್ರಣಕ್ಕೆ ತರಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇನೆ."






ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆ

- ಆಗಿನ BBMP (ಈಗಿನ GBA) ಸಹಕಾರದೊಂದಿಗೆ ನಾಯಂಡಹಳ್ಳಿ ಮತ್ತು ಗಂಗೊಂಡನಹಳ್ಳಿ ಪ್ರದೇಶದ ಮುಖ್ಯ ರಸ್ತೆ ಹಾಗೂ ಅಡ್ಡರಸ್ತೆಗಳ ಇಕ್ಕೆಲಗಳಲ್ಲಿ 3,500ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು, ಅವುಗಳ ನಿರಂತರ ಪಾಲನೆ ಮಾಡಲಾಗಿದೆ.
- ಗಿಡ ನೆಡುವಿಕೆ, ಸ್ವಚ್ಛತಾ ಅಭಿಯಾನಗಳು ಮತ್ತು ಪರಿಸರ ಸಂರಕ್ಷಣಾ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗಿದೆ.
- ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನೆಡಲಾಗಿದ್ದ 1,00,000 (ಒಂದು ಲಕ್ಷ) ಗಿಡಗಳನ್ನು ಜವಾಬ್ದಾರಿಯಿಂದ ನೋಡಿಕೊಂಡು, ಅವುಗಳನ್ನು ಬೆಳೆಸಿ, ಪರಿಸರ ಸಂರಕ್ಷಣೆಗೆ ನನ್ನ ಕೊಡುಗೆಯನ್ನು ನೀಡಿದ್ದೇನೆ.
- ಗಂಧದ ಮರಗಳು ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಮಾಹಿತಿಗಾಗಿ ಸಲ್ಲಿಸಿದ RTI ಅರ್ಜಿಗಳ ಆಧಾರದಲ್ಲಿ, ಮಾಹಿತಿ ಹಕ್ಕು ಕಾಯ್ದೆ, 2005ರ ಅನ್ವಯ ಸಂಬಂಧಿತ ಮಾಹಿತಿ ಆಯೋಗವು ಹಿಂದಿನ ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ನಿರ್ದೇಶಕರಿಗೆ ರೂ. 25,000/– ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ರೂ. 10,000/– ದಂಡ ವಿಧಿಸಿದೆ.
- 2016ರಲ್ಲಿ ನಾಯಂಡಹಳ್ಳಿಯ ವಿನಾಯಕ ಬಡಾವಣೆಯ ಸಾಯಿ ರಸ್ತೆಯಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಜಾಗದಲ್ಲಿ ನಡೆಯುತ್ತಿದ್ದ ಅನಧಿಕೃತ ಕಟ್ಟಡ ತ್ಯಾಜ್ಯ ಸುರಿವಿಕೆಯ ವಿರುದ್ಧ ದೃಢ ಹೋರಾಟ ನಡೆಸಲಾಯಿತು. ದಿನಕ್ಕೆ ಸುಮಾರು 50 ಟ್ರ್ಯಾಕ್ಟರ್‌ಗಳಿಂದ ತ್ಯಾಜ್ಯ ಸುರಿದು, ಪ್ರತೀ ಟ್ರ್ಯಾಕ್ಟರ್‌ಗೆ ₹500 ಅಕ್ರಮವಾಗಿ ವಸೂಲಿ ಮಾಡಲಾಗುತ್ತಿತ್ತು. ಈ ವಿಷಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ, ರಿಜಿಸ್ಟ್ರಾರ್ ಹಾಗೂ ರಾಜ್ಯಪಾಲರ ಗಮನಕ್ಕೆ ತಂದು ತ್ಯಾಜ್ಯ ಸುರಿವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಸಾರ್ವಜನಿಕರು ಮತ್ತು ಶಾಲಾ ಮಕ್ಕಳ ಆರೋಗ್ಯವನ್ನು ರಕ್ಷಿಸಲಾಯಿತು.
- ವೃಷಭಾವತಿ ನಾಲೆಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಸಾಗಾಣಿಕೆಯನ್ನು ಪತ್ರಿಕಾ ಮತ್ತು ಟಿವಿ ಮಾಧ್ಯಮಗಳ ಜೊತೆಗೆ ಸಂಬಂಧಪಟ್ಟ ಇಲಾಖೆಯ ಸಹಕಾರದಿಂದ ಯಶಸ್ವಿಯಾಗಿ ತಡೆಗಟ್ಟಲಾಯಿತು.
- ಸಾರ್ವಜನಿಕ ಉದ್ಯಾನವನಗಳು, ಶಾಲೆಗಳು ಮತ್ತು ಮಠಗಳಲ್ಲಿ ಇರುವ ಶೌಚಾಲಯಗಳನ್ನು ಅಗತ್ಯವಿದ್ದಾಗ ಸ್ವಚ್ಛಗೊಳಿಸಲಾಗಿದೆ.
- "ಬೀದಿ ನಾಯಿಗಳು, ಹಸುಗಳು, ಎಮ್ಮೆಗಳನ್ನು ಹಾಗೂ ಪಕ್ಷಿಗಳು ಅನಾರೋಗ್ಯಕ್ಕೊಳಗಾದಾಗ ಅಥವಾ ಗಾಯಗೊಂಡಾಗ, NGO ಮತ್ತು ಸರ್ಕಾರಿ ಪಶುವೈದ್ಯಕೀಯ ಇಲಾಖೆಗಳ ಸಹಾಯದಿಂದ ಅವುಗಳಿಗೆ ಚಿಕಿತ್ಸೆ ನೀಡಿ, ಚೇತರಿಸಿಕೊಳ್ಳಲು ನೆರವಾಗಿದ್ದೇನೆ."
- "ವಸತಿ ಪ್ರದೇಶಗಳಲ್ಲಿ ಹಾವುಗಳು ಕಾಣಿಸಿಕೊಂಡ ಸಂದರ್ಭಗಳಲ್ಲಿ ಸಾರ್ವಜನಿಕರ ಮನವಿಯ ಮೇರೆಗೆ ಅಗತ್ಯ ಕ್ರಮಗಳನ್ನು ಕೈಗೊಂಡು, ತರಬೇತಿ ಪಡೆದ ಹಾವು ಹಿಡಿಯುವವರ ಸಹಕಾರದೊಂದಿಗೆ ಅವುಗಳನ್ನು ಸುರಕ್ಷಿತವಾಗಿ ರಕ್ಷಿಸಿ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ.







ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ ಕಾರ್ಯಗಳು

- 2017ರಲ್ಲಿ ಸುರಿದ ಧಾರಾಕಾರ ಮಳೆಯಿಂದ ನಾಯಂಡಹಳ್ಳಿಯ ಅರಳಿ ಮರ ರಸ್ತೆ ಮತ್ತು ತಿಗಳರ ಬಡಾವಣೆಯ ಸುಮಾರು 250 ಮನೆಗಳು ಹಾನಿಗೊಳಗಾದಾಗ, ಸಕ್ರಿಯವಾಗಿ ಮುಂದಾಳತ್ವ ವಹಿಸಿ BBMP (GBA) ವತಿಯಿಂದ ಮಳೆ ಪರಿಹಾರ ದೊರಕುವಂತೆ ಕ್ರಮ ಕೈಗೊಂಡು, ಸಂಕಷ್ಟದಲ್ಲಿದ್ದ ಕುಟುಂಬಗಳಿಗೆ ಅಗತ್ಯ ನೆರವು ಒದಗಿಸಲಾಯಿತು.
- ವರ್ಷಾನುಗಟ್ಟಲೆ ಕಲುಷಿತ ನೀರನ್ನು ಸೇವಿಸುತ್ತಿದ್ದ ನೂರಾರು ಕುಟುಂಬಗಳ ಸಮಸ್ಯೆಗೆ ಸ್ಪಂದಿಸಿ, ಸಂಬಂಧಿತ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಕೇವಲ 20 ಗಂಟೆಗಳೊಳಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಲಾಯಿತು.
- ನಾಯಂಡಹಳ್ಳಿ ಐಟಿಐ ಬಡಾವಣೆ, ಕೈಲಾಸೇಶ್ವರ ದೇವಸ್ಥಾನ ಹಾಗೂ ವಾಲಿಬಾಲ್ ಮೈದಾನ ಪಕ್ಕದ ಉದ್ಯಾನವನಗಳಲ್ಲಿ ನಿಷ್ಕ್ರಿಯ 75 ವಿದ್ಯುತ್ ಕಂಬಗಳನ್ನು ದುರಸ್ತಿ ಮಾಡಿ, ಪಶ್ಚಿಮ ನಗರ ಪಾಲಿಕೆಯಿಂದ LED ದೀಪಗಳನ್ನು ಅಳವಡಿಸಲಾಯಿತು.










- ಕೆಲವು ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ ಮತ್ತು ರಸ್ತೆಗಳಿಗೆ ಸಂಬಂಧಿಸಿದ ಒಳಚರಂಡಿ ವ್ಯವಸ್ಥೆ ಅಭಿವೃದ್ಧಿಪಡಿಸಲಾಗಿದೆ.
- ಊಳು ತುಂಬಿದ್ದ ಮೋರಿಗಳನ್ನು ಸ್ವಚ್ಛಗೊಳಿಸಲಾಗಿದೆ.
- ಬೇಸಿಗೆ ಸಮಯದಲ್ಲಿ ನೀರಿನ ಕೊರತೆ ಉಂಟಾದಾಗ ಸಂಬಂಧಪಟ್ಟ ಇಲಾಖೆಯ ಮೂಲಕ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.
- ಬೇಸಿಗೆ ಸಮಯದಲ್ಲಿ ಬೋರ್ವೆಲ್ ಕೊರೆಸುವಲ್ಲಿ ಮುಂದಾಳತ್ವ ವಹಿಸಿ ಯಶಸ್ಸು ಸಾಧಿಸಲಾಗಿದೆ.
- ಕಾವೇರಿ ನೀರು ಸರಬರಾಜು ಲಭ್ಯವಿರದ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ.
- 2018ರಲ್ಲಿ, ವಿಜಯ ಕರ್ನಾಟಕ ಪತ್ರಿಕೆಯ Phone-In ಕಾರ್ಯಕ್ರಮದಲ್ಲಿ ಭಾಗವಹಿಸಿ, BWSSB ಅಧ್ಯಕ್ಷರಾಗಿದ್ದ ತುಷಾರ ಗಿರಿನಾಥ್ ಅವರೊಂದಿಗೆ ಮಾತನಾಡಿ, BWSSB ಮೂಲಕ ರೂ. 36 ಲಕ್ಷ ಮೊತ್ತದಲ್ಲಿ ನಾಯಂಡಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಿಂದ ರೈಲ್ವೆ ನಿಲ್ದಾಣದವರೆಗೆ ಒಳಚರಂಡಿ ವ್ಯವಸ್ಥೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಯಿತು.
- ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ ನಿರ್ಮಿಸಲಾದ ಪಾದಚಾರಿ ಮೇಲ್ಸೇತುವೆಯ ಲಿಫ್ಟ್ (Elevator / Lift) ದುರಸ್ತಿಗಾಗಿ ಸಂಬಂಧಿತ ಇಲಾಖೆಯೊಂದಿಗೆ ನಿರಂತರವಾಗಿ ಪತ್ರ ವ್ಯವಹಾರ ನಡೆಸುತ್ತಾ, ಸಮಸ್ಯೆಯ ಶೀಘ್ರ ಪರಿಹಾರಕ್ಕಾಗಿ ಪ್ರಯತ್ನಿಸುತ್ತಿದ್ದೇವೆ.







ಶಿಕ್ಷಣ ಮತ್ತು ವಿದ್ಯಾರ್ಥಿ ಸೇವೆಗಳು

- "2010ರಲ್ಲಿ ಇಂದಿನ ನೃಪತುಂಗ ವಿಶ್ವವಿದ್ಯಾಲಯದ ಭಾಗವಾಗಿರುವ ಸರ್ಕಾರಿ ವಿಜ್ಞಾನ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಮಧ್ಯಾಹ್ನದ ಊಟಕ್ಕೆ ತೊಂದರೆ ಅನುಭವಿಸುತ್ತಿರುವುದನ್ನು ಗಮನಿಸಿ, ಈ ವಿಷಯವನ್ನು ಕಾಲೇಜಿನ ಪ್ರಾಧ್ಯಾಪಕರ ಗಮನಕ್ಕೆ ತರಲಾಯಿತು. ಕಾಲೇಜಿನ ಸಿಬ್ಬಂದಿಗಳ ಉದಾರ ಸಹಕಾರದಿಂದ ವಿದ್ಯಾರ್ಥಿಗಳಿಗಾಗಿ ಮಧ್ಯಾಹ್ನದ ಊಟದ ಯೋಜನೆ ಆರಂಭಗೊಂಡು, ಅದು ಇಂದಿಗೂ ಯಶಸ್ವಿಯಾಗಿ ಮುಂದುವರಿಯುತ್ತಿದೆ."
- 1000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್ ನೀಡಿ, 75% ಕ್ಕಿಂತ ಹೆಚ್ಚು ಅಂಕ ಗಳಿಸಲು ಸಹಾಯ ಮಾಡಲಾಗಿದೆ.
- ವಿದ್ಯಾರ್ಥಿಗಳಿಗೆ ಸಿಗಬೇಕಾಗಿದ್ದ ಬಹುಮಾನ ದುರ್ಬಳಕೆ ಆಗದಂತೆ ತಡೆದು, ನೇರವಾಗಿ ಅವರಿಗೆ ತಲುಪುವಂತೆ ಮಾಡಲಾಗಿದೆ.
- ನಿರ್ಗತಿಕ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಮತ್ತು ಅಗತ್ಯವಿದ್ದವರಿಗೆ ಆರ್ಥಿಕ ಸಹಾಯ ಒದಗಿಸಲಾಗಿದೆ.
- ವೃತ್ತಿಪರ ಕೋರ್ಸ್ 3000 ವಿದ್ಯಾರ್ಥಿಗಳಿಗೆ ನುರಿತ ಪ್ರಾಧ್ಯಾಪಕರ ಮಾರ್ಗದರ್ಶನದ ಮೂಲಕ ಅವರ ಶೈಕ್ಷಣಿಕ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡಲಾಗಿದೆ.
- 2010ರಲ್ಲಿ ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ, ವಿದ್ಯಾರ್ಥಿಗಳಿಂದ ಅನಗತ್ಯ ಹಣ ಸಂಗ್ರಹಿಸುವ ಪದ್ಧತಿಗೆ ಕಡಿವಾಣ.
- ವಿಜ್ಞಾನ ದಿನ, ಶಿಕ್ಷಕರ ದಿನ, ಮಹಾನ್ ವ್ಯಕ್ತಿಗಳ ಜಯಂತಿಗಳ ಆಚರಣೆ ಮೌಲ್ಯಾಧಾರಿತ ಸಮಾಜ ಜಾಗೃತಿ

ಸಾಮಾಜಿಕ ಮತ್ತು ಕ್ರೀಡಾ ಚಟುವಟಿಕೆಗಳು

- ₹8,00,000 ವೆಚ್ಚದಲ್ಲಿ "ನಾಯಂಡಹಳ್ಳಿ 10K ರನ್" ಅನ್ನು ಯಶಸ್ವಿಯಾಗಿ ಆಯೋಜಿಸಿ, ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರೊಂದಿಗೆ ಫಿಟ್ನೆಸ್ ಸಂಸ್ಕೃತಿಯನ್ನು ಉತ್ತೇಜಿಸಿ, ಸಮುದಾಯ ಏಕತೆಯನ್ನು ಬಲಪಡಿಸಲಾಯಿತು. 10 ಕಿ.ಮೀ ಮತ್ತು 3 ಕಿ.ಮೀ ವಿಭಾಗಗಳಲ್ಲಿ ಎಲ್ಲಾ ವಯೋಮಾನದ ವಿಜೇತ ಕ್ರೀಡಾಪಟುಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.
- ಯೋಗ ಮತ್ತು ಫಿಟ್ನೆಸ್ ತರಗತಿಗಳನ್ನು ಉಚಿತವಾಗಿ ನಡೆಸಿ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಫಿಸಿಕಲ್ ಟೆಸ್ಟ್‌ಗಳಿಗೆ ಮಾರ್ಗದರ್ಶನ ನೀಡಲಾಗಿದೆ.
- ನೂರಾರು ಕ್ರೀಡಾಪಟುಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಹೋರಾಟ ನಡೆಸಿ, ಯಶಸ್ಸು ಸಾಧಿಸಲಾಯಿತು.






ನಾಯಕತ್ವ, ಗೌರವಗಳು ಮತ್ತು ವೈಯಕ್ತಿಕ ನಿಷ್ಠೆ

- ಅನೇಕ ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದೇನೆ.
- "ಅಂಚೆ ಇಲಾಖೆಯ ಪೋಸ್ಟ್ ಫೋರಂ ಸದಸ್ಯನಾಗಿ, ಅನೇಕ ಜನರ ಅಹವಾಲುಗಳನ್ನು ಪರಿಹರಿಸಿ, ಅವರಿಗೆ ನ್ಯಾಯ ಮತ್ತು ಸಮಯೋಚಿತ ನೆರವು ದೊರಕುವಂತೆ ಮಾಡಿದ್ದೇನೆ."
- ಸಮಾಜಸೇವೆಗೆ ಮಠಾಧೀಶರು, ಸಚಿವರು, ಶಾಸಕರು ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಅನೇಕ ಸನ್ಮಾನಗಳು.
- ಸಮಾಜದ ಅಭಿವೃದ್ಧಿಗಾಗಿ ತೊಡಗಿಸಿಕೊಂಡ ನಂತರ, ವೈಯಕ್ತಿಕ ಕಷ್ಟ–ಸುಖಗಳನ್ನು ಹಾಗೂ ಸ್ವಂತ ಅಭಿವೃದ್ಧಿಯನ್ನು ಪಕ್ಕಕ್ಕಿಟ್ಟು, ಇಂದಿಗೂ ರೂ. 3,150 ಬಾಡಿಗೆಯ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದೇನೆ.






ಜನರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ನನ್ನ ಸ್ಪಷ್ಟ ಯೋಜನೆ

"ಆಯ್ಕೆಯಾದ ಕ್ಷಣದಿಂದಲೇ ಜನತಾದರ್ಶನದ ಮೂಲಕ ಜನರೊಂದಿಗೆ ನೇರ ಸಂಪರ್ಕ ಸಾಧಿಸಿ, ಅವರ ತುರ್ತು ಸಮಸ್ಯೆಗಳು ಮತ್ತು ಅಗತ್ಯಗಳನ್ನು ಪ್ರಾಥಮಿಕವಾಗಿ ಪರಿಹರಿಸುವುದರೊಂದಿಗೆ, ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಕೆಳಕಂಡ ಪ್ರಮುಖ ಯೋಜನೆಗಳನ್ನು ಜಾರಿಗೆ ತರುವುದಾಗಿ ಬದ್ಧನಾಗಿದ್ದೇನೆ".

- **ಆರೋಗ್ಯ** - ಸಣ್ಣ ದೊಡ್ಡ ಎಲ್ಲ ಕಾಯಿಲೆಗೂ ನಮ್ಮ ವಾರ್ಡಿನ ಸರ್ಕಾರಿ ಆಸ್ಪತ್ರೆಯಲ್ಲೇ ಚಿಕಿತ್ಸೆ ಮತ್ತು ಔಷಧಿ ಸಿಗಬೇಕು. ಹೊರಗೆ ಹೋಗಿ ಹಣ ಖರ್ಚು ಮಾಡಬೇಕಾದ ಸ್ಥಿತಿ ಬಾರದಂತೆ ನೋಡಿಕೊಳ್ಳಲಾಗುವುದು. ಉಚಿತ ಯೋಗ ಮತ್ತು ವ್ಯಾಯಾಮ ತರಬೇತಿಯೂ ಇರುತ್ತದೆ.
- **ಉದ್ಯೋಗ** - ನಮ್ಮ ಯುವಕರು ಉದ್ಯೋಗಕ್ಕಾಗಿ ಅಲೆದಾಡಬಾರದು. ಉದ್ಯೋಗ ಮೇಳಗಳ ಮೂಲಕ ಕೆಲಸದ ಅವಕಾಶ ಮತ್ತು ಸರ್ಕಾರಿ ಉದ್ಯೋಗಗಳಿಗೆ ಉಚಿತ ತರಬೇತಿ ಕೊಡುತ್ತೇವೆ.

- **ಮೂಲಭೂತ ಸೌಕರ್ಯ** - ನೀರು, ವಿದ್ಯುತ್, ರಸ್ತೆ, ಒಳಚರಂಡಿ, ಪಾರ್ಕ್ – ಇವು ಬೇಡಿಕೆ ಅಲ್ಲ, ನಿಮ್ಮ ಹಕ್ಕು. ಇವೆಲ್ಲವನ್ನು ಸರಿಯಾಗಿ ಒದಗಿಸುವೆನು.
- **ಸಾಮಾಜಿಕ ಭದ್ರತೆ** - ವೃದ್ಧಾಪ್ಯ, ವಿಧವಾ, ಅಂಗವಿಕಲ, ಸಂಧ್ಯಾ ಸುರಕ್ಷಾ ವೇತನ, ಅರ್ಹರಿಗೆ ಯಾವುದೇ ತೊಂದರೆ ಇಲ್ಲದೆ ತಲುಪುವಂತೆ ಮಾಡುವೆನು.
- **ಶಿಕ್ಷಣ** - ನಮ್ಮ ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲೇ ಖಾಸಗಿ ಶಾಲೆಗಳ ಮಟ್ಟದ ಗುಣಮಟ್ಟದ ಶಿಕ್ಷಣ ಸಿಗಬೇಕು. ಪೋಷಕರು ಲಕ್ಷಾಂತರ ಹಣ ಖರ್ಚು ಮಾಡಬೇಕಾಗಬಾರದು.
- **ಕಾನೂನು ಸುವ್ಯವಸ್ಥೆ ಮತ್ತು ಸ್ವಚ್ಛತೆ** - ಸ್ವಚ್ಛ, ಹಸಿರು ಮತ್ತು ಸುರಕ್ಷಿತ ವಾರ್ಡಾಗಿ ರೂಪಿಸುವುದೇ ನಮ್ಮ ಮೊದಲ ಆದ್ಯತೆ.

ನನ್ನ ಸ್ಪಷ್ಟ ನಿಲುವು ಮತ್ತು ಬದ್ಧತೆ

- ಹಲವರು ತಮ್ಮ ಪಕ್ಷ, ಶಾಸಕರು ಮತ್ತು ಸಂಸದರು ಮಾಡಿದ ಕೆಲಸಗಳ ಬಗ್ಗೆ ಮಾತನಾಡುತ್ತಾರೆ. ಆದರೆ ನಾನು ಯಾವುದೇ ಅಧಿಕಾರವಿಲ್ಲದೇ ಮಾಡಿದ ಕೆಲಸಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ತಮ್ಮ ಆಶೀರ್ವಾದ ಮತ್ತು ಅವಕಾಶ ದೊರೆತರೆ, ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ದೃಢ ನಂಬಿಕೆ ನನಗಿದೆ.
- ಚುನಾವಣೆಯನ್ನು ಹಣ ಹೂಡಿ ಲಾಭ ಪಡೆಯುವ ಸಾಧನವಾಗಿ ಅಲ್ಲ, ಜನಸೇವೆಯ ಪವಿತ್ರ ವೇದಿಕೆಯಾಗಿ ಪರಿಗಣಿಸಿ, ಪಾರದರ್ಶಕ, ಪ್ರಾಮಾಣಿಕ ಮತ್ತು ಜವಾಬ್ದಾರಿಯುತ ಸೇವೆ ಸಲ್ಲಿಸುವ ಸಂಕಲ್ಪ ಹೊಂದಿದ್ದೇನೆ.
- ಕ್ಷಣಿಕ ಲಾಭಕ್ಕಾಗಿ ಅಲ್ಲ, ನಾಗರಬಾವಿ ವಾರ್ಡಿನ ಶಾಶ್ವತ ಮತ್ತು ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುವುದು ನನ್ನ ಧ್ಯೇಯವಾಗಿದೆ.
- ವಯೋವೃದ್ಧರಿಗೆ ಮೊಮ್ಮಗನಾಗಿ, ಹಿರಿಯರಿಗೆ ಮಗನಾಗಿ, ಸಮವಯಸ್ಕರಿಗೆ ಸ್ನೇಹಿತನಾಗಿ ಹಾಗೂ ಕಿರಿಯರಿಗೆ ಸಹೋದರನಾಗಿ, ಜನರ ಕಷ್ಟ-ಸುಖಗಳಲ್ಲಿ ಸದಾ ನಿಸ್ವಾರ್ಥವಾಗಿ ಜೊತೆ ನಿಲ್ಲುವೆನೆಂದು ಬದ್ಧನಾಗಿದ್ದೇನೆ.

ವಾಟ್ಸಾಪ್ ಗುಂಪಿಗೆ ಸೇರಿ



ನಾಗರಭಾವಿಯ ಅಭಿವೃದ್ಧಿಗೆ ನಿಮ್ಮ ಬೆಂಬಲ ಅಗತ್ಯ. ವಾರ್ಡಿನ ಮತದಾರರಾಗಿದ್ದರೆ, QR ಕೋಡ್ ಅನ್ನು ಸ್ಕ್ಯಾನ್ ಮಾಡಿ "ನಾಗರಭಾವಿ ವಾರ್ಡ್ ಜನಾಭಿವೃದ್ಧಿ ವೇದಿಕೆ 2026" ಗುಂಪಿಗೆ ಸೇರಿ.

ಚುನಾವಣೆಗೆ ಸಂಬಂಧಿಸಿದ ಸಭೆಗಳು, ಕರಪತ್ರ ಹಂಚಿಕೆ, ಸಲಹೆ ಹಾಗೂ ಪ್ರಚಾರ ಚಟುವಟಿಕೆಗಳಲ್ಲಿ ಸ್ವಯಂಸೇವಕರಾಗಿ (Volunteer Group) ಭಾಗವಹಿಸಲು QR ಕೋಡ್ ಅನ್ನು ಸ್ಕ್ಯಾನ್ ಮಾಡಲು ವಿನಂತಿ.













ಸೂಚನೆ

"ಈ ಕರಪತ್ರದಲ್ಲಿರುವ ವಿವರಗಳನ್ನು ಓದಿದ ನಂತರ, ದಯವಿಟ್ಟು ಈ ಸಂದೇಶವನ್ನು ನಿಮಗೆ ಗೊತ್ತಿರುವವರಿಗೆ ತಿಳಿಸಿ ಮತ್ತು ಅವರು ಕೂಡ ಇತರರಿಗೆ ತಿಳಿಸುವಂತೆ ಹೇಳಿ, ಇದರಿಂದ ಕನಿಷ್ಠ 100 ಜನರಿಗೆ ತಲುಪುವಂತೆ ಸಹಾಯಮಾಡಿ."

ಸಮಾಜ ಸೇವೆಗೆ ಸಮರ್ಪಿತರಾದ ವೀರಯ್ಯ ಹಿರೇಮಠ ಅವರು ಇದುವರೆಗೆ ಕೈಗೊಂಡಿರುವ ವಿವಿಧ ಸಮಾಜಮುಖಿ ಕಾರ್ಯಗಳ ಫೋಟೋಗಳು ಮತ್ತು ವೀಡಿಯೊಗಳನ್ನು ಕೆಳಗಿನ ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಬಹುದು.


veeraiah.hiremath.7 | veeraiahh_hiremath | www.veeraiahhiremath.com











ಇಂತಿ ತಮ್ಮ ಸೇವಾಕಾಂಕ್ಷಿ **ವೀರಯ್ಯ ಹಿರೇಮಠ,** M.Sc., DIEC, DISE, PGDELT

ಸಮಾಜ ಸೇವಕರು ಹಾಗೂ ಅಧ್ಯಕ್ಷರು – ಜಗದೋಪಕಾರಿ ಚಾರಿಟಬಲ್ ಟ್ರಸ್ಟ್ (ರಿ) ; ಮ್ಯಾರಥಾನ್ ಕ್ರೀಡಾಪಟು (42.195 ಕಿ.ಮೀ.);
ಲೇಖಕರು, ಭಾಷಣಕಾರರು ಹಾಗೂ RTI ಹೋರಾಟಗಾರರು ; ಆಯೋಜಕರು – ನಾಯಂಡಹಳ್ಳಿ 10K ರನ್ ;
ಸರ್ಕಾರಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳು ;
ಮಾಜಿ ಕಾರ್ಯದರ್ಶಿಗಳು – ವಿವೇಕಾನಂದ ಗುರುಕುಲ ಸಂಸ್ಥೆ ; ಮಾಜಿ ಸಂಯೋಜಕರು – ವಿವೇಕಾನಂದ ಟ್ಯುಟೋರಿಯಲ್

ನಿಮ್ಮ ಸಮಸ್ಯೆಗಳು ನಮಗೆ ಅತ್ಯಂತ ಮಹತ್ವದ್ದಾಗಿವೆ. ಯಾವುದೇ ಸಾರ್ವಜನಿಕ ದೂರುಗಳು ಅಥವಾ ಸಹಾಯಕ್ಕಾಗಿ, ದಯವಿಟ್ಟು ಸಂಪರ್ಕಿಸಿ

ಮೊಬೈಲ್ : 9448387950 / 9590981865